**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಮಾನ್ಯ ಸದಸ್ಯರ ಹೆಸರು | ಡಾ. ಎಂ.ಜಿ. ಮೂಳೆ (ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1016 |
| ಉತ್ತರಿಸಬೇಕಾದ ದಿನಾಂಕ | 25.08.2026 |
| ಉತ್ತರಿಸಬೇಕಾದ ಸಚಿವರು | ಮಾನ್ಯ ವಸತಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆ-ನಗರ (PMAY-U) ಅಡಿ ಮಂಜೂರಾದ, ಪೂರ್ಣಗೊಂಡ ಮತ್ತು ಫಲಾನುಭವಿಗಳಿಗೆ ನೀಡಲಾದ ಮನೆಗಳೆಷ್ಟು; (ತಾಲ್ಲೂಕುವಾರು ವಿವರ ನೀಡುವುದು) | **ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ:** |

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ಬೀದರ್ ಜಿಲ್ಲೆಗೆ ಕಳೆದ ಮೂರು ವರ್ಷಗಳಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆ-ನಗರ (PMAY-U) ಅಡಿ ಯಾವುದೇ ಮನೆಗಳು ಮಂಜೂರಾಗಿರುವುದಿಲ್ಲ.

ಮಂಡಳಿಗೆ 2015-16ನೇ ಸಾಲಿನಿಂದ 2018-19ನೇ ಸಾಲಿನ ವರೆಗೆ ವಿವಿಧ ಹಂತಗಳಲ್ಲಿ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆಯನ್ನು ರಾಜ್ಯ ಸರ್ಕಾರದ ವಸತಿ ಯೋಜನೆಗಳಾದ ಡಾ: ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆ ಮತ್ತು ವಾಜಪೇಯಿ ನಗರ ವಸತಿ ಯೋಜನೆಯನ್ನು ಸಂಯೋಜನೆಗೊಳಿಸಿ ಅನುಷ್ಠಾನಗೊಳಿಸಲಾಗುತ್ತಿದ್ದು ಸದರಿ ಯೋಜನೆಯಡಿ ರಾಜ್ಯಾದ್ಯಂತ ವಿವಿಧ ಕೊಳಗೇರಿ ಪ್ರದೇಶಗಳಲ್ಲಿ ಒಟ್ಟು 1,78,600 (AHP) ಮನೆಗಳ ನಿರ್ಮಾಣಕ್ಕೆ ಮಂಜೂರಾತಿ ದೊರೆತಿರುತ್ತದೆ.

ಒಟ್ಟು ಮಂಜೂರಾದ ಮನೆಗಳ ಪೈಕಿ ಈವರೆಗೆ ಒಟ್ಟಾರೆ 1,30,943 ಮನೆಗಳು ಪ್ರಾರಂಭವಾಗಿದ್ದು, 90473 ಮನೆಗಳ ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿದ 40,470 ಮನೆಗಳ ನಿರ್ಮಾಣ ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತದೆ. 47,657 ಮನೆಗಳನ್ನು ಪ್ರಾರಂಭಿಸಬೇಕಾಗಿರುತ್ತದೆ.

ಪೂರ್ಣಗೊಂಡಿರುವ ಮನೆಗಳ ಪೈಕಿ ಮೊದಲನೇ ಹಂತದಲ್ಲಿ ದಿನಾಂಕ:02.03.2024 ರಂದು 36,789 ಮನೆಗಳನ್ನು ಮತ್ತು 2ನೇ ಹಂತದಲ್ಲಿ ದಿನಾಂಕ:24.01.2026 ರಂದು 42,345 ಮನೆಗಳನ್ನು ಒಟ್ಟಾರೆ 79,134 ಮನೆಗಳನ್ನು ಸನ್ಮಾನ್ಯ ಮುಖ್ಯ ಮಂತ್ರಿಗಳ ಅಮೃತ ಹಸ್ತದಿಂದ ಲೋಕಾರ್ಪಣೆ ಮಾಡಿ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ.

ಸದರಿ ಯೋಜನೆಯಡಿ ಬೀದರ್ ಜಿಲ್ಲೆಗೆ ಒಟ್ಟು 5647 ಮನೆಗಳು ಮಂಜೂರಾಗಿದ್ದು, 4637 ಮನೆಗಳನ್ನು ಪ್ರಾರಂಭಿಸಲಾಗಿರುತ್ತದೆ. ಅವುಗಳ ಪೈಕಿ 3397 ಮನೆಗಳನ್ನು ಪೂರ್ಣಗೊಳಿಸಲಾಗಿರುತ್ತದೆ. 2782 ಮನೆಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ. 1240 ಮನೆಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತದೆ. ಬಾಕಿ ಪ್ರಾರಂಭಿಸದೇ ಇರುವ 1010 ಮನೆಗಳನ್ನು ಕೇಂದ್ರ ಸರ್ಕಾರದ ಆದೇಶ ದಿನಾಂಕ:27.02.2026ರನ್ವಯ ಕಡಿತಗೊಳಿಸಲಾಗಿದೆ.

ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿವೆ.

| Sl. No | Name of the Project (Taluk wise) | Sanctioned Houses | No of Houses | | | | |
|---|---|---|---|---|---|---|---|
| | | | Total No of Houses started | Completed | Under Progress | Allotted | Curtailed Houses |
| 1 | Bidar | 1500 | 1500 | 1500 | 0 | 1192 | 0 |
| 2 | Bidar Town | 750 | 700 | 621 | 79 | 430 | 50 |
| 3 | Humnabad | 250 | 250 | 250 | 0 | 250 | 0 |
| 4 | Humnabad Town | 500 | 500 | 216 | 284 | 100 | 0 |
| 5 | Bhalki | 400 | 400 | 400 | 0 | 400 | 0 |
| 6 | Basavakalyan Town. | 800 | 443 | 260 | 183 | 260 | 357 |
| 7 | Basavakalyan Town. | 552 | 552 | 0 | 552 | 0 | 0 |
| 8 | Chitaguppa Town. | 545 | 292 | 150 | 142 | 150 | 253 |
| 9 | Aurad Town | 350 | 0 | 0 | 0 | 0 | 350 |
| | | 5647 | 4637 | 3397 | 1240 | 2782 | 1010 |

**ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ:**

ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ (ನಗರ) ಕಳೆದ ಮೂರು ವರ್ಷಗಳಲ್ಲಿ ಅಂದರೆ 2023-24 ರಿಂದ ಇಲ್ಲಿಯವರೆಗೆ ಒಟ್ಟು 446 ಮನೆಗಳು ಮಂಜೂರಾಗಿವೆ. ಈ ಪೈಕಿ 248 ಮನೆಗಳು ಪೂರ್ಣಗೊಂಡಿದ್ದು58 ಮನೆಗಳ ಕಾಮಗಾರಿ ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತವೆ. 140 ಮನೆಗಳು ಪ್ರಾರಂಭವಾಗಿರುವುದಿಲ್ಲ.

| ವರ್ಷ | ಯೋಜನೆಯ ಹೆಸರು | ಅನುಮೋದನೆಗೊಂಡ ಮನೆಗಳು | ಪೂರ್ಣಗೊಂಡ ಮನೆಗಳು | ಪ್ರಗತಿಯಲ್ಲಿರುವ ಮನೆಗಳು | ಪ್ರಾರಂಭವಾಗದ ಮನೆಗಳು |
|---|---|---|---|---|---|
| 2023-24 | BLC Non Convergence | 44 | 21 | 23 | 0 |
| 2023-24 | BLC Convergence | 402 | 227 | 35 | 140 |
| Total | | 446 | 248 | 58 | 140 |

2021-22ನೇ ಸಾಲಿನಲ್ಲಿ ರಾಜ್ಯ ವಸತಿ ಯೋಜನೆಗಳಡಿ 402 ಮನೆಗಳನ್ನು ಕೇಂದ್ರ ಪುರಸ್ಕೃತ PMAY(U) ಅಡಿ 2023-24ನೇ ಸಾಲಿನಲ್ಲಿ ಸೇರಿಗಡಿಸಿ ಅನುಮೋದನೆ ಪಡೆದಿದೆ.

ತಾಲ್ಲೂಕುವಾರು ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಿದೆ.

ಆ) ನೂತನ PMAY-U 2.0 ಯೋಜನೆಯಡಿ ಬೀದರ್ ಜಿಲ್ಲೆಗೆ ನಿಗದಿಪಡಿಸಿದ ಒಟ್ಟು ಮನೆಗಳ ಗುರಿ ಎಷ್ಟು ಹಾಗೂ ಮುಂದಿನ 3 ವರ್ಷಗಳಲ್ಲಿ ಎಷ್ಟು ಮನೆ ಕಟ್ಟಲು ಉದ್ದೇಶಿಸಲಾಗಿದೆ;

**ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ:**
ನೂತನ PMAY-U 2.0 ಯೋಜನೆಯನ್ನು ಮಂಡಳಿಯಲ್ಲಿ ಜಾರಿಗೊಳಿಸಿರುವುದಿಲ್ಲ.

**ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ:**
ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ನಗರ 2.0 ಯೋಜನೆಯನು ರಾಜ್ಯದಲ್ಲಿ ರಾಜ್ಯ ಪುರಸ್ಕೃತ ನಗರ ವಸತಿ ಯೋಜನೆಗಳೊಂದಿಗೆ ಸಮನ್ವಯಗೊಳಿಸಿ ಅನುಷ್ಠಾನಗೊಳಿಸಲಾಗುತ್ತಿದೆ.
PMAY(U) 2.0 ಯೋಜನೆಯು ಬೇಡಿಕೆ ಆಧಾರಿತ ಯೋಜನೆಯಾಗಿದ್ದು, ರಾಜ್ಯದಲ್ಲಿ ಸಲ್ಲಿಕೆಯಾಗುವ ಮನೆಗಳ ಬೇಡಿಕೆಗೆ ಅನುಗುಣವಾಗಿ ಕೇಂದ್ರ ಸರ್ಕಾರವು ಪ್ರತಿ ಮನೆಗೆ ರೂ.1.50 ಲಕ್ಷಗಳ ಅನುದಾನವನ್ನು ಒದಗಿಸುವುದು.

ರಾಜ್ಯ ಸರ್ಕಾರವು 2026-27ನೇ ಸಾಲಿನ ಆಯವ್ಯಯದಲ್ಲಿ ರಾಜ್ಯಕ್ಕೆ 1 ಲಕ್ಷ BLC ಆಧಾರಿತ ಮನೆಗಳ ಭೌತಿಕ ಗುರಿಯನು ಒದಗಿಸಿದ್ದು, ಸದರಿ ಗುರಿಯಲ್ಲಿ ನಗರ ವಸತಿ ಯೋಜನೆಗಳಿಗೆ ಮೀಸಲಿರಿಸುವ ಮನೆಗಳನ್ನು PMAY(U) 2.0 ರಡಿ ಸಮನ್ವಯಗೊಳಿಸಲಾಗುವುದು.

ಆಯವ್ಯಯದ ಘೋಷಣೆಯಂತೆ ಮನೆಗಳ ಗುರಿಯನ್ನು ಹಂಚಿಕೆ ಮಾಡಲು ಕ್ರಮವಹಿಸಲಾಗುವುದು. ಸರ್ಕಾರವು ಪ್ರತಿ ವರ್ಷ ಆಯವ್ಯಯದಲ್ಲಿ ನಿಗದಿಪಡಿಸುವ ಅನುದಾನಕ್ಕೆ ಅನುಗುಣವಾಗಿ ನಗರ ಸ್ಥಳೀಯ ಸಂಸ್ಥೆಗಳಿಗೆ ನಿಗದಿಪಡಿಸಿ ಹಂತ ಹಂತವಾಗಿ ಎಲ್ಲಾ ಅರ್ಹ ವಸತಿರಹಿತರಿಗೆ ವಸತಿ ಸೌಲಭ್ಯ ಒದಗಿಸಲು ಕ್ರಮವಹಿಸಲಾಗುತ್ತದೆ.

ಇ) ಜಿಲ್ಲೆಯಲ್ಲಿ ಮನೆಗಳ ನಿರ್ಮಾಣ ವಿಳಂಬವಾಗುತ್ತಿರುವುದು ಗಮನಕ್ಕೆ ಬಂದಿದೆಯೇ; ವಿಳಂಬಕ್ಕೆ ಕಾರಣಗಳೇನು ಹಾಗೂ ಸೆಪ್ಟೆಂಬರ್ 2026ರ ಒಳಗೆ ಪೂರ್ಣಗೊಳಿಸಲು ಕೈಗೊಂಡ ಕ್ರಮಗಳೇನು:

ಬಂದಿದೆ.

**ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ:**

ಕಾಮಗಾರಿ ನಿರ್ವಹಿಸುವಲ್ಲಿ ವಿಳಂಬವಾಗಲು ಕಾರಣಗಳು :-

1. ಫಲಾನುಭವಿಗಳು ಹಾಲಿ ವಾಸಿಸುವ ಶಿಥಿಲಾವಸ್ಥೆ ಮನೆಗಳನ್ನು ಖಾಲಿ ಮಾಡಿಕೊಡುವಲ್ಲಿ ವಿಳಂಬ.
2. ಫಲಾನುಭವಿಗಳು ಪ್ರಾರಂಭಿಕ ವಂತಿಕೆ ಹಣ ಪಾವತಿಸಲು ವಿಳಂಬ ಮಾಡಿರುವುದರಿಂದ ನಿಗಧಿತ ಅವಧಿಯಲ್ಲಿ ಭೌತಿಕ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗಿರುವುದಿಲ್ಲ.
3. ದಿನಾಂಕ:9.08.2019 ರಿಂದ 12.12.2019ರವರೆಗೆ ಸುಮಾರು 125 ದಿವಸಗಳು ಮತ್ತು ದಿನಾಂಕ:23.3.2020 ರಿಂದ ದಿನಾಂಕ:17.05.2020 ರವರೆಗೆ ಸುಮಾರು 55 ದಿವಸಗಳು ಒಟ್ಟು 180 ದಿನಗಳು ಕೋವಿಡ್-19 ಲಾಕ್ ಡೌನ್ ನಿಂದ ಕಾಮಗಾರಿ ಸ್ಥಗಿತಗೊಂಡಿರುತ್ತದೆ.
4. ಸರ್ಕಾರ ಆದೇಶ ಸಂಖ್ಯೆವಇ 16 ಹೆಚ್‌ಎಫ್‌ಎ 2019, ದಿನಾಂಕ:11.07.2019ರಂದು ಹೊಸದಾಗಿ ಪ್ರಾರಂಭಿಸುವ ಕಾಮಗಾರಿಗಳನ್ನು ಸ್ಥಗಿತಗೊಳಿಸುವಂತೆ ಸರ್ಕಾರವು ನಿರ್ದೇಶನ ನೀಡಿದ್ದು. ಸರ್ಕಾರ ಆದೇಶ ಸಂಖ್ಯೆ ವಇ 16 ಹೆಚ್‌ಎಫ್‌ಎ 2019, ದಿನಾಂಕ:12.12.2019ರನ್ವಯ ಕಾಮಗಾರಿಯನ್ನು ಪ್ರಾರಂಭಿಸಿರುವ ಹಿನ್ನೆಯಲ್ಲಿ ಸುಮಾರು 6 ತಿಂಗಳ ಕಾಲ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿರುತ್ತದೆ.
5. ಕಾಮಗಾರಿಯು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತದೆ. ಸಾಲ ಮಂಜೂರಾತಿ ಪ್ರಕ್ರಿಯೆ ಮತ್ತು ಫಲಾನುಭವಿಗಳಿಂದ ಪ್ರಾರಂಭಿಕ ವಂತಿಕೆ ವಸೂಲಾತಿ ಪ್ರಕ್ರಿಯೆಯಲ್ಲಿ ವಿಳಂಭವಾಗಿರುವುದರಿಂದ

ಕಾಮಗಾರಿಯ ಪ್ರಗತಿ ಕುಂಠಿತಗೊಂಡಿರುತ್ತದೆ.

6. ಮುಂದುವರೆದಂತೆ ಸದರಿ ಯೋಜನೆಯಡಿ ಮಂಜೂರಾದ ಮನೆಗಳ ಘಟಕ ವೆಚ್ಚ ಸರಾಸರಿ ರೂ.5.95 ಲಕ್ಷಗಳಿಂದ ರೂ.7.52 ಲಕ್ಷಗಳಾಗಿರುತ್ತದೆ. ಈ ಪೈಕಿ ಕೇಂದ್ರ ಸರ್ಕಾರವು 1.50 ಲಕ್ಷಗಳನ್ನು ಹಾಗೂ ರಾಜ್ಯ ಸರ್ಕಾರವು ರೂ. 2.00 ಲಕ್ಷಗಳನ್ನು (ಪರಿಶಿಷ್ಟ ಜಾತಿ/ಪಂಗಡಕ್ಕೆ) ಮತ್ತು ಇತರೇ ಫಲಾನುಭವಿಗಳಿಗೆ ರೂ.1.20 ಲಕ್ಷಗಳನ್ನು ಇತರೇ ಫಲಾನುಭವಿಗಳಿಗೆ ಉಳಿದ ಮೊತ್ತವನ್ನು ಫಲಾನುಭವಿಗಳಿಂದ / ಫಲಾನುಭವಿಗಳ ಹೆಸರಿನಲ್ಲಿ ಬ್ಯಾಂಕ್ ಸಾಲ ಸೌಲಭ್ಯ ಒದಗಿಸಿ ಫಲಾನುಭವಿಗಳ ವಂತಿಕೆಯನ್ನು ಭರಿಸಬೇಕಾಗಿತ್ತು.

ಪ್ರಸ್ತುತ ಸರ್ಕಾರದ ಆದೇಶ ಸಂಖ್ಯೆ:ವಇ 148 ಹೆಚ್‌ಎಫ್‌ಎ 2023, ದಿನಾಂಕ:30.12.2023ರಂತೆ ಮನೆಗಳ ಫಲಾನುಭವಿಗಳಿಂದ ಪ್ರತಿ ಮನೆಗೆ ಗರಿಷ್ಠ ರೂ.1.00 ಲಕ್ಷಗಳ ಫಲಾನುಭವಿ ವಂತಿಕೆ ಪಾವತಿಸಿಕೊಂಡು ಉಳಿದ ಮೊತ್ತವನ್ನು ಸರ್ಕಾರದಿಂದ ಭರಿಸಲು ಆದೇಶಿಸಲಾಗಿರುತ್ತದೆ.

ಕೇಂದ್ರ ಸರ್ಕಾರದ ಪತ್ರ ದಿನಾಂಕ:27.02.2026ರಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಅನುಷ್ಠಾನ ಅವಧಿಯನ್ನು ಸೆಪ್ಟೆಂಬರ್-2026 ಅಂತ್ಯದ ವರೆಗೆ ನಿಗದಿಪಡಿಸಿದ್ದು, ತದನಂತರ ಪ್ರಗತಿಯಲ್ಲಿರುವ ಮನೆಗಳಿಗೆ ಕೇಂದ್ರ ಸರ್ಕಾರವು ಕೇಂದ್ರದ ಸಹಾಯ ಧನವನ್ನು ನೀಡಲು ಸಾಧ್ಯವಾಗದ ಬಗ್ಗೆ ತಿಳಿಸಿರುತ್ತಾರೆ.

ಈ ಮನೆಗಳಿಗೆ ಕೇಂದ್ರ/ರಾಜ್ಯ ಸರ್ಕಾರದ ಸಹಾಯಧನ ಒದಗಿಸಿಕೊಡಲು ಕೋರಿ ಕೇಂದ್ರ ಸರ್ಕಾರಕ್ಕೆ ದಿನಾಂಕ:31.03.2026 ಮತ್ತು 07.07.2026 ರಂದು ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ ಹಾಗೂ ಅನುಮೋದನೆ ನಿರೀಕ್ಷಿಸಿದೆ. ಅದರಂತೆ, ಅನುದಾನವನ್ನು ಒದಗಿಸಿಕೊಂಡು ಮನೆಗಳನ್ನು ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ. ಅದರಂತೆ ಫಲಾನುಭವಿಗಳಿಂದ ರೂ. 1.00 ಲಕ್ಷಗಳನ್ನು ಪಾವತಿಸಿಕೊಂಡು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಾಯ ಧನ ಹಾಗೂ ರಾಜ್ಯ ಸರ್ಕಾರದಿಂದ ಫಲಾನುಭವಂತಿಕೆ ಬಿಡುಗಡೆಗೆ ಅನುಗುಣವಾಗಿ ಮನೆಗಳ ನಿರ್ಮಾಣವನ್ನು ಪೂರ್ಣಗೊಳಿಸಲು ಕ್ರಮ ವಹಿಸಲಾಗುತ್ತಿದೆ.

**ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ:**

ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ)–BLC ಘಟಕದಡಿ ಫಲಾನುಭವಿಗಳೇ ಸ್ವಂತವಾಗಿ ಮನೆಗಳನ್ನು ನಿರ್ಮಿಸಿಕೊಳ್ಳುತ್ತಿದ್ದಾರೆ.

ಮನೆಗಳ ನಿರ್ಮಾಣದ ವಿಳಂಬಕ್ಕೆ ಕಾರಣಗಳು

1. **ಫಲಾನುಭವಿಗಳ ಆರ್ಥಿಕ ಅಸಮರ್ಥತೆ:**
   ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಒದಗಿಸಲಾಗುವ ಸಹಾಯಧನದ ಜೊತೆಗೆ ಫಲಾನುಭವಿಗಳು ಭರಿಸಬೇಕಾದ ತಮ್ಮ ಪಾಲಿನ ಮೊತ್ತವನ್ನು ಹೊಂದಿಸಿಕೊಳ್ಳಲು, ವಿಶೇಷವಾಗಿ ಆರ್ಥಿಕವಾಗಿ ದುರ್ಬಲವಾಗಿರುವ ಕುಟುಂಬಗಳಿಗೆ, ತೊಂದರೆ ಉಂಟಾಗುತ್ತಿದೆ.

2. **ನಿರ್ಮಾಣ ಸಾಮಗ್ರಿಗಳ ಬೆಲೆ ಹೆಚ್ಚಳ:**
   ಅಲ್ಲದೆ, ನಿರ್ಮಾಣ ಸಾಮಗ್ರಿಗಳ ಬೆಲೆ ಹಾಗೂ ಕಾರ್ಮಿಕರ ಕೂಲಿ ದರಗಳು ಹೆಚ್ಚಾಗಿರುವುದರಿಂದ ಮನೆ ನಿರ್ಮಾಣಕ್ಕೆ ಅಗತ್ಯವಿರುವ ಹೆಚ್ಚುವರಿ ಮೊತ್ತವನ್ನು ಹೊಂದಿಸಿಕೊಳ್ಳಲು ಫಲಾನುಭವಿಗಳಿಗೆ ಸಾಧ್ಯವಾಗದೆ ನಿರ್ಮಾಣ ಕಾರ್ಯ ವಿಳಂಬವಾಗುತ್ತಿದೆ.

3. **ನಿವೇಶನ ಮತ್ತು ದಾಖಲೆಗಳಿಗೆ ಸಂಬಂಧಿಸಿದ ಸಮಸ್ಯೆಗಳು/ ಸ್ಥಳೀಯ ಸಂಸ್ಥೆಗಳ ಅನುಮತಿಗಳಲ್ಲಿ ವಿಳಂಬ**
   ನಿವೇಶನದ ಮಾಲೀಕತ್ವಕ್ಕೆ ಸಂಬಂಧಿಸಿದ ದಾಖಲೆಗಳು, e-Swathu, ಖಾತಾ, ಅಗತ್ಯವಿರುವ ನಕ್ಷೆ ಅನುಮೋದನೆ, ಕಟ್ಟಡ ಪರವಾನಗಿ ಹಾಗೂ ಇತರ ಸ್ಥಳೀಯ ಸಂಸ್ಥೆಗಳ ಅನುಮತಿಗಳನ್ನು ಸಕ್ಷಮ ಪ್ರಾಧಿಕಾರಗಳಿಂದ ಸಕಾಲದಲ್ಲಿ ಪಡೆಯಲು ಸಾಧ್ಯವಾಗದೆ ನಿರ್ಮಾಣ ಕಾರ್ಯ ವಿಳಂಬವಾಗುತ್ತಿದೆ.

**ಪ್ರಗತಿಯಲ್ಲಿರುವ ಮನೆಗಳನ್ನು ಪೂರ್ಣಗೊಳಿಸಲು ಕೈಗೊಂಡಿರುವ ಕ್ರಮಗಳು**

1. **ನೋಡಲ್ ಅಧಿಕಾರಿಗಳ ನೇಮಕ:**

   ರಾಜೀವ್ ಗಾಂಧಿ ವಸತಿ ನಿಗಮದಿಂದ ಜಿಲ್ಲಾವಾರು ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದ್ದು, ಸದರಿ ಅಧಿಕಾರಿಗಳು ಪ್ರತಿ ತಿಂಗಳು ಜಿಲ್ಲೆಗಳಿಗೆ ಪ್ರವಾಸ ಕೈಗೊಂಡು, ಸ್ಥಳೀಯ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಫಲಾನುಭವಿಗಳ ಮನೆಗಳಿಗೆ ಕ್ಷೇತ್ರ ಭೇಟಿ ನೀಡಿ, ಕಾಮಗಾರಿಯ ಪ್ರಗತಿಯನ್ನು ಪರಿಶೀಲಿಸಿ, ಮನೆಗಳ ನಿರ್ಮಾಣವನ್ನು ತ್ವರಿತವಾಗಿ ಪೂರ್ಣಗೊಳಿಸಲು ಕ್ರಮ ವಹಿಸುತ್ತಿದ್ದಾರೆ.

2. **ಫಲಾನುಭವಿಗಳಿಗೆ ನೋಟೀಸ್ ನೀಡುವುದು:**

   ಪ್ರಗತಿ ಕುಂಠಿತಗೊಂಡಿರುವ ಫಲಾನುಭವಿಗಳಿಗೆ ನೋಟೀಸ್ ನೀಡಿ, ನಿಗದಿತ ಕಾಲಮಿತಿಯೊಳಗೆ

| | | |
|---|---|---|
| | | ಮನೆ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಸೂಚಿಸಲಾಗುತ್ತಿದೆ.<br><br>3. **ಫಲಾನುಭವಿಗಳ ಮನವೊಲಿಕೆ:**<br><br>ನಿರ್ಮಾಣ ಕಾಮಗಾರಿ ವಿಳಂಬವಾಗಿರುವ ಫಲಾನುಭವಿಗಳನ್ನು ಸಂಪರ್ಕಿಸಿ, ಮನೆ ನಿರ್ಮಾಣವನ್ನು ತ್ವರಿತವಾಗಿ ಪೂರ್ಣಗೊಳಿಸಲು ಮನವೊಲಿಸಿ, ಅಗತ್ಯ ಮಾರ್ಗದರ್ಶನ ನೀಡಲಾಗುತ್ತಿದೆ.<br><br>4. **ನಿಯಮಿತ ಪ್ರಗತಿ ಪರಿಶೀಲನೆ:**<br>ಮನೆಗಳ ಭೌತಿಕ ಹಾಗೂ ಆರ್ಥಿಕ ಪ್ರಗತಿಯನ್ನು ಪರಿಶೀಲಿಸಲು ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ನಿಯಮಿತ ಪ್ರಗತಿ ಪರಿಶೀಲನಾ ಸಭೆಗಳನ್ನು ನಡೆಸಿ, ಕಾಮಗಾರಿ ವಿಳಂಬದ ಅಡಚಣೆಗಳನ್ನು ತ್ವರಿತವಾಗಿ ಪರಿಹರಿಸಲು ಅಗತ್ಯ ಸೂಚನೆಗಳನ್ನು ನೀಡಲಾಗುತ್ತಿದೆ. |
| ಈ) | PMAY-U 2.0 ಅಡಿಯಲ್ಲಿ ಬಡ ಫಲಾನುಭವಿಗಳ ಪಾರದರ್ಶಕ ಆಯ್ಕೆಗೆ ಸರ್ಕಾರ ರೂಪಿಸಿರುವ ಹೊಸ ಮಾರ್ಗಸೂಚಿಗಳೇನು? | **ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ:**<br>ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) 2.0ನ್ನು ಸೆಪ್ಟಂಬರ್ 2024ರಲ್ಲಿ ಜಾರಿಗೊಳಿಸಿದ್ದು, ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರವು ಕರಾರು ಒಪ್ಪಂದ (MoU) ಮಾಡಿಕೊಳ್ಳಲಾಗಿರುತ್ತದೆ. ಸರ್ಕಾರದ ಆದೇಶ ದಿನಾಂಕ:23.05.2025ರನ್ವಯ ಮಾರ್ಗಸೂಚಿಯಂತೆ ಗುರಿಗಳನ್ನು ನಿಗದಿಪಡಿಸಲು ಪರಿಶೀಲಿಸಲಾಗುತ್ತಿದೆ.<br><br>**ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ:**<br>ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) 2.0 ನ್ನು ರಾಜ್ಯದಲ್ಲಿ ರಾಜ್ಯ ಪುರಸ್ಕೃತ ವಸತಿ ಯೋಜನೆಗಳ ಸಮನ್ವಯತೆಯೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ.<br><br>**ಫಲಾನುಭವಿಗಳ ಆಯ್ಕೆಯಲ್ಲಿ ಪಾರದರ್ಶಕತೆ:**<br><br>1. ಅರ್ಹ ಕುಟುಂಬಗಳು Unified Web Portal ಮೂಲಕ ವಸತಿಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವುದು. ನಗರ ಸ್ಥಳೀಯ ಸಂಸ್ಥೆಗಳು ಅರ್ಜಿದಾರರ ಅರ್ಹತೆಯನ್ನು ಪರಿಶೀಲಿಸಬೇಕು.<br>2. ರಾಜ್ಯ ವಸತಿ ಯೋಜನೆಗಳಡಿ ನಿಗದಿಪಡಿಸುವ ಭೌತಿಕ ಗುರಿಗೆ ಎದುರಾಗಿ ಅರ್ಹ ಫಲಾನುಭವಿಗಳನ್ನು ಗುರುತಿಸಿ ನಗರ ಸ್ಥಳೀಯ ಸಂಸ್ಥೆಯು ಪಟ್ಟಿ ಸಿದ್ಧಪಡಿಸಿ, ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ಜರುಗುವ ನಗರ ಆಶ್ರಯ ಸಮಿತಿಯು ಲಾಟರಿ ಎತ್ತುವ ಮೂಲಕ ಫಲಾನುಭವಿಗಳನ್ನು ಆಯ್ಕೆ ಮಾಡುವುದು.<br>3. ಜಿಲ್ಲಾ ಮಟ್ಟದಲ್ಲಿ District Level Sanctioning and Monitoring committee ರಚಿಸಲಾಗಿದ್ದು, ಇದರಿಂದ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆ ಹೆಚ್ಚುತ್ತದೆ.<br>4. ದುರ್ಬಲ ವರ್ಗದ ಮತ್ತು ವಿಶೇಷ ವರ್ಗಕ್ಕೆ ಸೇರಿದ ಕುಟುಂಬಗಳನ್ನು ಗುರುತಿಸಿ, ಅವರಿಗೆ ಆದ್ಯತೆಯ ಮೇರೆಗೆ ವಸತಿ ಸೌಲಭ್ಯ ಕಲ್ಪಿಸಲಾಗುವುದು<br><br>**ಫಲಾನುಭವಿಗಳ ಅರ್ಹತೆ;**<br><br>• ಫಲಾನುಭವಿಯು ವಿವಾಹಿತ ಮಹಿಳೆ ಅಥವಾ ಏಕ ಮಹಿಳಾ ಒಡೆತನದ ಗೃಹಿಣಿಯಾಗಿರಬೇಕು. ಇವರನ್ನು ಹೊರತುಪಡಿಸಿ ಪುರುಷರಾಗಿದ್ದಲ್ಲಿ ಮಾಜಿ ಯೋಧರು, ವಿಧುರರು, ಅಂಗವಿಕಲರು, ಹಿರಿಯ ನಾಗರಿಕರು ವಿಚ್ಛೇದಿತರು ಅರ್ಹರಾಗಿರುತ್ತಾರೆ.<br>• ಫಲಾನುಭವಿ ಕುಟುಂಬದ ವಾರ್ಷಿಕ ಆದಾಯವನ್ನು ಈ ಕೆಳಗಿನಂತೆ ನಿಗದಿಪಡಿಸಿದೆ:<br>EWS: 3.00 ಲಕ್ಷದೊಳಗೆ<br>LIG: 3.00 ಲಕ್ಷದಿಂದ 6.00 ಲಕ್ಷದೊಳಗೆ<br>MIG: 6.00 ಲಕ್ಷದಿಂದ 9.00 ಲಕ್ಷದೊಳಗೆ<br><br>• ರಾಜ್ಯ ಮತ್ತು ಕೇಂದ್ರ ಸರ್ಕಾರದ ಬೇರೆ ಯಾವುದೇ ಯೋಜನೆ /ಇಲಾಖೆಯಿಂದ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಆಯ್ಕೆಯಾಗಿ 20 ವರ್ಷದಿಂದ ವಸತಿ ಯೋಜನೆಯಡಿಯಲ್ಲಿ ಸಹಾಯಧನ ಪಡೆದು ಮನೆ ನಿರ್ಮಾಣ ಮಾಡಿಕೊಂಡಿರಬಾರದು.<br>• ಸಂಬಂಧಪಟ್ಟ ನಗರ/ಪಟ್ಟಣದ ದಿನಾಂಕ:01.09.2024 ರ ದೊಳಗೆ ವಾಸವಿರುವ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.<br>• ರಾಜ್ಯದ ಯಾವುದೇ ಭಾಗದಲ್ಲಿ ನಿವೇಶನ ಅಥವಾ ವಸತಿ ಹೊಂದಿರದ ಕುಟುಂಬವನ್ನು ನಿವೇಶನ ರಹಿತರು ಎಂದು ಪರಿಗಣಿಸುವುದು.<br>• ರಾಜ್ಯದ ಯಾವುದೇ ಭಾಗದಲ್ಲಿ ಪಕ್ಕಾ ಮನೆಯನ್ನು ಹೊಂದಿರದ, ಆದಾಗ್ಯೂ ನಿವೇಶನ ಹೊಂದಿರುವ / ಕಚ್ಚಾಮನೆ ಯನ್ನು ಹೊಂದಿರುವ ಕುಟುಂಬವನ್ನು ವಸತಿ ರಹಿತ ಕುಟುಂಬವೆಂದು |

| | | |
|---|---|---|
| | | ಪರಿಗಣಿಸುವುದು<br>• ಫಲಾನುಭವಿಯು ಸ್ವಂತ ನಿವೇಶನ ಹೊಂದಿದ್ದಲ್ಲಿ ನಿವೇಶನಕ್ಕೆ ಸಂಬಂಧಿಸಿದಂತೆ ಹಕ್ಕುಪತ್ರ /ಕ್ರಯಪತ್ರ/ ದಾನಪತ್ರ/ಉಡುಗೊರೆ ಪತ್ರ/ಖಾತಾ ಪತ್ರಗಳನ್ನು ಹೊಂದಿರಬೇಕು.<br><br>ಈ ಹಿಂದೆ ಪ್ರಧಾನ ಮಂತ್ರಿ ಆವಾಸ್ ನಗರ ಯೋಜನೆಯಡಿಯಲ್ಲಿ ಆಯ್ಕೆಯಾಗಿ ಮನೆ ನಿರ್ಮಿಸದೇ ದಿನಾಂಕ:31.12.2023ರ ನಂತರ ಕೇಂದ್ರ ಸರ್ಕಾರದಿಂದ ಮನೆ ರದ್ದಾದ ಫಲಾನುಭವಿಗಳು ಸಮೀಕ್ಷೆಯಡಿಯಲ್ಲಿ ಅರ್ಜಿ ಸಲ್ಲಿಸಲು ಅನರ್ಹರಾಗಿರುತ್ತಾರೆ. |

ಸಂಖ್ಯೆ: ವಇ 172 ಹೆಚ್‌ಎಫ್‌ಎ 2026]

(ಬಿ.ಜೆಡ್ ಜಮೀರ್ ಅಹ್ಮದ್ ಖಾನ್)
ವಸತಿ ಸಚಿವರು.

Annexure-1

LCQ-1016

| District | Town | Scheme | Year | Houses Sanctioned | Completed | Total Progress | Total not Started |
|---|---|---|---|---|---|---|---|
| Bidar | Basavakalyana CMC | PMAYU BLC Convergence | 2023-2024 | 14 | 11 | 0 | 3 |
| Bidar | Basavakalyana CMC | PMAYU BLC Convergence | 2023-2024 | 60 | 44 | 2 | 14 |
| | **Basavakalyana CMC Total** | | | **74** | **55** | **2** | **17** |
| Bidar | Bidar CMC | PMAYU BLC Convergence | 2023-2024 | 76 | 26 | 6 | 44 |
| Bidar | Bidar CMC | PMAYU BLC Convergence | 2023-2024 | 24 | 6 | 3 | 15 |
| | **Bidar CMC Total** | | | **100** | **32** | **9** | **59** |
| Bidar | Chitguppa TMC | PMAYU BLC Convergence | 2023-2024 | 18 | 11 | 1 | 6 |
| Bidar | Chitguppa TMC | PMAYU BLC Convergence | 2023-2024 | 5 | 0 | 0 | 5 |
| Bidar | Chitguppa TMC | PMAYU BLC Convergence | 2023-2024 | 55 | 18 | 7 | 30 |
| | **Chitguppa TMC Total** | | | **78** | **29** | **8** | **41** |
| Bidar | Hallikheda TMC | PMAYU BLC Convergence | 2023-2024 | 53 | 50 | 2 | 1 |
| Bidar | Hallikheda TMC | PMAYU BLC Convergence | 2023-2024 | 17 | 16 | 0 | 1 |
| Bidar | Hallikheda TMC | PMAYU Non Convergence | 2023-2024 | 44 | 21 | 23 | 0 |
| | **Hallikheda TMC Total** | | | **114** | **87** | **25** | **2** |
| Bidar | Humnabad TMC | PMAYU BLC Convergence | 2023-2024 | 18 | 10 | 5 | 3 |
| Bidar | Humnabad TMC | PMAYU BLC Convergence | 2023-2024 | 5 | 4 | 0 | 1 |
| Bidar | Humnabad TMC | PMAYU BLC Convergence | 2023-2024 | 57 | 31 | 9 | 17 |
| | **Humnabad TMC Total** | | | **80** | **45** | **14** | **21** |
| | **Grand Total** | | | **446** | **248** | **58** | **140** |